ಶ್ರೀ ಬಿ. ಸ್ವಾಮಿರಾವ್—ಆನೆಗಳನ್ನು ಓಡಿಸುವುದಕ್ಕೆ ಹೋಗುವ ಜನಗಳನ್ನೇ ಆನೆಗಳು ಓಡಿಸಿಕೊಂಡು ಹೋಗುತ್ತವೆ. ಬೇರೆ ಬೇರೆ ಕಾರಣಗಳಿಗೋಸ್ಕರ ಜನರು ಕಾಡಿಗೆ ಹೋಗಿರುವಾಗ ಆನೆಗಳು ಅವರನ್ನು ಕೊಂದಿರಬಹುದೆಂದು ತಾವು ಹೇಳಿದ್ದೀರಿ. ನಿಮ್ಮ ಅರಣ್ಯ ಇಲಾಖೆಯ ಅಧಿಕಾರಿಗಳಲ್ಲೇ ಕೆಲವರು ಬೇರೆಯವರೊಡನೆ ಶಾಮೀಲಾಗಿ ಅರಣ್ಯವನ್ನು ಲೂಟಿ ಮಾಡುತ್ತಿದ್ದಾರೆ. ಅದರ ಬಗ್ಗೆ ತಾವು ಕ್ರಮ ತೆಗೆದುಕೊಳ್ಳುತ್ತೀರಾ ಎಂದು ಕೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಬಿ. ರಾಚಯ್ಯ.—ಇದರ ಬಗ್ಗೆ ನಾನು ಕಳೆದ ಸಾರಿಯೇ ಉತ್ತರ ಕೊಟ್ಟಿದ್ದೇನೆ. ಅಧಿಕಾರಿಗಳು ಬೇರೆಯವರೊಡನೆ ಶಾಮೀಲಾಗಿ ಕಾಡಿನ ಸ್ವತ್ತನ್ನು ಅಪಹರಿಸುತ್ತಿರುವ ಮಾಹಿತಿ ಸಿಕ್ಕಿದರೆ ಅವರುಗಳ ಮೇಲೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ. ಸ್ವಾಮಿರಾವ್.—ಸರ್ಕಾರದ ಕ್ಯಾಬಿನೆಟ್‌ನಲ್ಲಿರತಕ್ಕಂಥವರು, ಕಾಡಿನ ಪ್ರಾಣಿಗಳನ್ನು ವಧೆ ಮಾಡಿದ್ದವರು, ಅಥವಾ ಶಿಕಾರಿ ಮಾಡಿದ್ದವರು ಇದ್ದರೆ ಅಂಥವರ ಮೇಲೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ? ಅವರಿಂದ ರಾಜೀನಾಮೆ ಕೊಡಿಸುತ್ತೀರಾ? ಅಥವಾ ಸರ್ಕಾರವೇ ರಾಜೀನಾಮೆ ಕೊಡುತ್ತದೆಯೋ ಎಂದು ಕೇಳುತ್ತೇನೆ.

ಶ್ರೀ ಬಿ. ರಾಚಯ್ಯ.—ಸ್ವಾಮಿರಾಯರು ಆಗಾಗ ರಾಜೀನಾಮೆ ಕೇಳತ್ತಾನೇ ಇರುತ್ತಾರೆ. ನಮ್ಮ ಮಂತ್ರಿಮಂಡಲದಲ್ಲಿ ಅರಣ್ಯ ಪ್ರಾಣಿಗಳನ್ನು ಶಿಕಾರಿ ಮಾಡಿದ್ದವರು ಸೇರಿಕೊಂಡಿದ್ದಾರೆಂದು ಹೇಳಿದ್ದಾರೆ. ಬಹುಶಃ ಆ ವಿಷಯ ನನ್ನ ಗಮನಕ್ಕೆ ಇನ್ನೂ ಬಂದಿಲ್ಲ.

ಶ್ರೀ ಕೆ. ಎಚ್. ಶ್ರೀನಿವಾಸ್.—ನಿಮ್ಮ ಜನರಿಗೆ ಆ ವಿಷಯವನ್ನು ತಂದರೆ ಮಂತ್ರಿಮಂಡಲದಲ್ಲಿ ಸೇರಿಸಿಕೊಂಡಿರುವವರನ್ನೂ ನೀವು ಶಿಕಾರಿ ಮಾಡುತ್ತೀರಾ ಎಂದು ಕೇಳುತ್ತೇವೆ.

ರಾಜ್ಯದಲ್ಲಿರುವ ಸರ್ಕಾರಿ ಹಾಗೂ ಖಾಸಗಿ ಇಂಜನೀಯರಿಂಗ್ ಕಾಲೇಜುಗಳು

೪೪೦ ಶ್ರೀ ಚಂದ್ರಕಾಂತ್ ಬೆಲ್ಲದ್ (ಧಾರವಾಡ ಶಹರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ರಾಜ್ಯದಲ್ಲಿರುವ ಸರ್ಕಾರಿ ಹಾಗೂ ಖಾಸಗಿ ಇಂಜಿನೀಯರಿಂಗ್ ಕಾಲೇಜುಗಳ ಸಂಖ್ಯೆ ಎಷ್ಟು (ಸರ್ಕಾರಿ ಮತ್ತು ಖಾಸಗಿ ಕಾಲೇಜುಗಳ ಪ್ರತ್ಯೇಕ ವಿವರ ನೀಡುವುದು)?

ಆ) ಯಾವ ಯಾವ ವಿಷಯಗಳ ವಿಭಾಗ (ಡಿಪಾರ್ಟ್‌ಮೆಂಟ್) ಇರುವುವು ಹಾಗೂ ಪ್ರತಿಯೊಂದು ಕಾಲೇಜಿನ ಎಲ್ಲ ವಿಭಾಗಗಳಲ್ಲಿ ಖಾಯಂ ವಿಷಯ ಪರಿಣಿತರು ಇರುವರೇ? (ವಿವರ ನೀಡುವುದು)

ಇ) ಪ್ರತಿಯೊಂದು ಕಾಲೇಜುಗಳಲ್ಲಿ ಎಲ್ಲ ವಿಷಯಗಳ ಸುಸಜ್ಜಿತವಾದ ಪ್ರಯೋಗಾಲಯಗಳು ಇವೆಯೆ? (ವಿವರ ನೀಡುವುದು)

ಈ) ಖಾಯಂ ವಿಷಯ ಪರಿಣಿತರು, ಪ್ರಯೋಗಾಲಯಗಳು ಹಾಗೂ ಸುಸಜ್ಜಿತವಾದ ಗ್ರಂಥಾಲಯಗಳನ್ನು ಹೊಂದದೆ ಇರುವ ಕಾಲೇಜುಗಳ ಪ್ರತ್ಯೇಕ ವಿವರ ನೀಡುವುದು?

ಶ್ರೀ ಎಂ. ಚಂದ್ರಶೇಖರ್ (ಮಾನ್ಯ ಶಿಕ್ಷಣ ಸಚಿವರು).—

ಅ) ರಾಜ್ಯದಲ್ಲಿ ಒಟ್ಟು ೫೦ ಇಂಜಿನೀಯರಿಂಗ್ ಕಾಲೇಜುಗಳಿಗೆ. ವಿವರಗಳು ಈ ಕೆಳಕಂಡಂತೆ ಇರುತ್ತವೆ.

೧)	ಸರ್ಕಾರಿ ಕಾಲೇಜು	— ೨
೨)	ವಿಶ್ವವಿದ್ಯಾನಿಲಯ	— ೨
೩)	ರೀಜನಲ್ ಕಾಲೇಜು	— ೧
೪)	ಅನುದಾನಿತ ಕಾಲೇಜು	— ೧೧
೫)	ಖಾಸಗಿ ಅನುದಾನ ರಹಿತ ಕಾಲೇಜುಗಳು	— ೩೪
	ಒಟ್ಟು	೫೦

ಆ) ಪ್ರತಿ ಕಾಲೇಜಿನಲ್ಲಿ ಭೋಧಿಸುವ ವಿಷಯಗಳನ್ನು ಅನುಬಂಧ–I ರಲ್ಲಿ ನೀಡಿದೆ. ಸರ್ಕಾರಿ ಕಾಲೇಜಿನಲ್ಲಿರುವ ಬೋಧಕರ ವಿವರಗಳನ್ನು ಅನುಬಂಧ–II ರಲ್ಲಿ ನೀಡಿದೆ. ಖಾಸಗಿ ಕಾಲೇಜುಗಳ ಬಗ್ಗೆ ಮಾಹಿತಿಯನ್ನು ಅನುಬಂಧ–III ರ ಕಾಲಂ (i) ರಲ್ಲಿ ಒದಗಿಸಿದೆ.

ಇ) ಸರ್ಕಾರಿ ಇಂಜಿನೀಯರಿಂಗ್ ಕಾಲೇಜುಗಳಲ್ಲಿ ಹಾಗೂ ಅನುದಾನಿತ ಕಾಲೇಜುಗಳ ಅನುದಾನಿತ ಕೋರ್ಸುಗಳಿಗೆ ಪ್ರಯೋಗಾಲಯದ ವ್ಯವಸ್ಥೆಯನ್ನು ಪೂರ್ಣವಾಗಿ ಒದಗಿಸಲಾಗಿದೆ. ಅನುದಾನರಹಿತ ಖಾಸಗಿ ಕಾಲೇಜುಗಳ ಬಗ್ಗೆ ವಿವರಗಳನ್ನು ಅನುಬಂಧ-III ರ ಕಾಲಂ (ii)ರಲಿ ಒದಗಿಸಲಾಗಿದೆ.

ಈ) ಎಲ್ಲಾ ಮಾಹಿತಿಗಳನ್ನೂ ಅನುಬಂಧ–III ರಲ್ಲಿ ಒದಗಿಸಲಾಗಿದೆ.

ANNEXURE-I

ENGINEERING COLLEGES IN KARNATAKA COURSES AVAILABLE DETAILS

Sl. No.	Institutions	Category	Courses offered
BANGALORE DISTRICT (14)			
1.	University Visveshwaraya College of Engineering, Bangalore-560 001	Govt	CE/EE/ME/EN AR/CS
2.	University Visveshwaraya College of Engg. (Evening) Bangalore.	Govt.	EN
3.	Sri Krishnarajendra Silver Jubliee Technological Institute, K. R. Circle Bangalore-560001.	Government	TX
4.	B. M. Sreenivasaiah College of Engg., P B. No. 1908, Basavanagudi, Bangalore-560 019.	Aided	CE/EE/ME/EN/IP/ AR/TR/CS/TC
5.	B. M. Sreenivasaiah College of Engg., (Evening), Bangalore-560 019.	Aided	CE/ME/EE
6.	M. S. Ramaiah Institute of Technology, Gokul Extn. Post. Bangalore-560 054.	Private	CE/EE/ME/EN/ CH/IP/CS
7.	R. V. College of Engineering, Mysore Road, Bangalore-560 059.	Private	CE/EE/EN/CH/IP/ IT/CS/ME/EV
8.	Dayananda Sagar College of Engg. Shavige Malleswara Hills, South End of Jayanager, Kanakapura Rd., Bangalore-560 078.	Private	CE/EE/ME/EN/CH/ IP/CS/IT

9.	B'lore Institute of Technology Visveshwarapuram, K. R. Road, Bangalore–560 004.	Private	CE/EE/ME/EN/ IT/CS/IP
10.	Islamiah Institute of Techonology National Park Road, Bangalore-560 076	Private	CE/EE/ME/ EN/TR
11.	Dr. Ambedkar Institute of Technology, Mallathahally (Near Jnana Bharathi) Bangalore-560056,	Private	CE/EE/ME/EN/ CS/IP/IT
12.	Ghousia College of Engineering Ramanagaram, Bangalore-571511.	Private	CE/ME/EE/FN/ CS
13.	M. V. J. College of Engineering (Near White Field) Bangalore-560067.	Private	CE/EE/ME/EN CH/CS/IP
14.	Sir M. Visveswaraiah Institute of Technology, Royal Cottage, B'lore Palace, Bangalore-560 052.	private	CE/ME/EE/EN/ CS

BELGAUM DISTRICT (2)

15.	K. L. E.Society's Engineering College, Belgaum-590 001.	Private	CE/EE/ME/EN/ CS
16.	K. L. S. Gogte Institute of Technology, Tilak wadi Belgaum-560006.	Private	CE/EE/ME/EN

BELLARY DISTRICT (1)

17.	Vijayanagar Engineering College Bellary–583 102.	Private	CE/ME/EE/EN/ IP/AU/CS

1	2	3	4
	BIDAR DISTRICT (2)		
18.	Gurunanak Dev Engg. College, Bidar-Mailur Road. Bidar-586 403	Private	CE/EE/ME/EN/IP/
19.	Rural Engineering College Bhalki-585 328.	Private	CE/EE/EN/CS/IP
	BIJAPUR DISTRICT (2)		CS/AR/AU
20.	Basaveshwar Engg. College, Bagalkot-587 101.	Aided	CE/ME/ME/CS/IP EN/AU/IN
21.	BLDES College of Engineering, Bijapur-586 103.	Private	CE/EE/ME/EN/CS/ IP/AU
	CHICKMANGALUR DISTRICT (1)		
22.	Adichunchanagiri Institute of Technology, P. B. No. 91, Adichunchanagiri Exten., Chikkamangalur-577 102.	Private	CE/ME/EN/IP/ EE/CS
	CHITRADURGA DISTRICT (3)		
23.	BDT (Govt) College of Engg., Davangere-577 004.	Govt.,	CE/EE/ME/EN/CS IT/EV
24.	Bapuji Institute of Engg., and Technology, Davangere-577 002.	Private	CE/EE/ME/EN/IP/ CS/TX.
25.	J. M. Institute of Technology Chitradurga-577 502.	Private	CE/EE/ME/EN/IP CS/AU.

DAKSHINA KANNADA DISTRICT (4)			
26.	Karnataka Regional Engineering College, Surathkal-574 157.	Govt.,	CE/ME/EN/CH/MT/ MN/EE/CS.
27.	Manipal Institute of Technology, Manipal-576 119.	Private	CE/EE/ME/EN/CH/ IP/AR/CS
28.	Nitte Mahalinga Adyanathaya Memorial Institute of Techgy., Nitte-574 110.	Private	CS/EN/ME/EC/ IP/EE.
29.	Kuranji Venkataramana Gowda College of Engg., Sullia-574 239.	Private	CE/ME/EN
DHARWAD DISTRICT (4)			
30.	B. V. Bhoomareddy College of Engg., & Techgy., Hubli-580 031.	Aided	CE/EE/ME/EN/IP
31.	Sri Dharmasthala Manjunatheswara College of Engineering, Dharwad.	Aided Private	AR/CS/IN/AU CE/EE/ME/EN/CS
32.	S. T. J. Education Society's Engg., College, Ranebennur-581115.	Private	CE/EE/ME/EN
33.	Rural Enineering College, Hulkoti-582 205, Dharwad.	Private	CE/CH/TX/AU/ ME/IP/EN
GULBARGA DISTRICT (2)			
34.	Khaja Banda Nawaz College of Engg., Roura Buzurag, Gulbarga-585 105.	Private	CS/ME/EN/IT/CS
35.	Poojya Dodeappa Appa College of Engineering, Gulbarga-585 102.	Aided	CE/EE/ME/EN/IP/ AR/CC/CS/IT/AU

1	2	3	4
HASSAN DISTRICT (1)			
36.	Malnad College of Engg., P. B. No. 21, Hassan-573 201.	Aided	CE/EE/ME/EN/IP AR/AU/CS/IT
KODAGU DISTRICT (-)			
	———No College of Kodagu District———		
KOLAR DISTRICT (2)			
37.	Golden Valleys' Institute of Engineering, K. G. F.-563 120.	Private	EE/ME/MN.
38.	Jagadguru Chandrashekaranath Swamiji Institute of Technology Chickkaballapur Kolar-562 101.	Private	CE/ME/EN CS
MANDAYA DISTRICT (1)			
39.	P. E. S. College of Engineering, Mandya-571 401.	Aided	CE/EE/ME/EN IP/AU/CS/EV
MYSORE DISTRICT (4)			
40.	Sri Jayachamarajendra College of Engineering, Mysore-570 006.	Aided	CE/EE/ME/EN/IP/IT/ CS/EV/PN/TC
41.	Sri Jayachamarajendra College of Engineering (Evening) Mysore.	Aided	EE/ME/EN

42.	National Institute of Engineering, Mysore-570 008.	Aided	CE/EE/ME/EN/IP/ CS/EV.
43.	National Institute of Engg., (Evening) Mysore-570 008.	Aided	CE.
	RAICHUR DISTRICT (1)		
44.	Sorojini Liladharan Nair College of Engineering, P. B. No-60. Yermarus Camp, Raichur-584 135.	Private	CE/ME/EN/TX
	SHIMOGA DISTRICT (1)		
45.	Jawaharlal Nehru National College of Engineering, Shimoga-577 201.	Private	CE/EE/ME/ EN/IP
	TUMKUR DISTRICT (4)		
46.	Siddaganga Institute of Technology Tumkur-572 103.	Private	CE/EE/ME/EN/CH/IT IP/CS
47.	Siddaganga Institute of Technology (Condensed Course) Tumkur.	Private	CE/EE/ME
48.	Sri Siddartha Institute of Technology, Maralur, Tumkur-572 105.	Private	CE/EE/ME/EN/ IP/CS.
49.	Kalpataru Institute of Technology, Tiptur-572 202.	Private	CS/EN/IN
	UTTARA KANNADA DISTRICT (1)		
50.	Anjuman Engineering College, Bhatkal-581 320.	Private	CE/EE/ME/EN

INDEX

1. AR — Architectural Engineering.
2. AU — Automobile Engineering.
3. CC — Ceramics and Cement Technology.
4. CE — Civil Engineering.
5. CH — Chemical Engineering.
6. CS — Computer Science.
7. EE — Electrical Engineering.
8. EN — Electronics.
9. IP — Industrial Production Engineering.
10. IT — Instrumentation Technology.
11. ME — Mechanical Engineering.
12. MN — Mining.
13. MT — Metallurgy.
14. TR — Traffic and Transportation.
15. TC — Tele-communication Engineering.
16. TX — Textile Technology.
17. EV — Civil Environmental Engineering.
18. PN — Polymer Science and Technloogy.

ಅನುಬಂಧ—II

೧) ಸರ್ಕಾರಿ ಬಿ. ಡಿ. ಟಿ. ಇಂಜಿನಿಯರಿಂಗ್ ಕಾಲೇಜು, ದಾವಣಗೆರೆ

ಕ್ರಮ. ಸಂಖ್ಯೆ	ಹುದ್ದೆಯ ಪದನಾಮ	ಒಟ್ಟು ಹುದ್ದೆಗಳು	ಖಾಯಂ ಆಗಿ ಭರ್ತಿಯಾದ ಹುದ್ದೆಗಳು
೧	೨	೩	೪
೧)	ಪ್ರಿನ್ಸಿಪಾಲರು	೧	೧
೨)	ಪ್ರೊಫೆಸರ್ (ಇಂಜಿನಿಯರಿಂಗ್ ವಿಭಾಗ)		
	೧) ಸಿವಿಲ್	೨	೨
	೨) ಮೆಕ್ಯಾನಿಕಲ್	೨	೨
	೩) ಎಲೆಕ್ಟ್ರಿಕಲ್	೧	೧
	೪) ಇ ಅಂಡ್ ಸಿ	೧	೧
	೫) ಕಂಪ್ಯೂಟರ್ ಸೈನ್ಸ್	೧	ಖಾಲಿ
	೬) ಸಿಸ್ಟಂ ಮ್ಯಾನೇಜರ್ಸ್	೧	ಖಾಲಿ
	೭) ಇನ್‌ಸ್ಟ್ರುಮೆಂಟೇಷನ್ ಟೆಕ್ನಾಲಜಿ	೧	ಖಾಲಿ
	೮) ಟ್ರೈನಿಂಗ್ ಅಂಡ್ ಪ್ಲೇಸ್‌ಮೆಂಟ್ ಆಫೀಸರ್	೧	ಖಾಲಿ
	ಇಂಜಿನಿಯರಿಂಗೇತರ		
	೧) ಭೌತಶಾಸ್ತ್ರ	೧	೧
	೨) ಗಣಿತಶಾಸ್ತ್ರ	೧	೧
	೩) ರಸಾಯನಿಕ ಶಾಸ್ತ್ರ	೧	೧
	ಸಹಾಯಕ ಪ್ರಾಧ್ಯಾಪಕರು—ಇಂಜಿನಿಯರಿಂಗ್ ವಿಭಾಗ		
	೧) ಸಿವಿಲ್	೬	೩
	೨) ಮೆಕ್ಯಾನಿಕಲ್	೬	೪
	೩) ಎಲೆಕ್ಟ್ರಿಕಲ್	೩	೩
	೪) ಇ ಅಂಡ್ ಸಿ	೩	ಖಾಲಿ
	೫) ಕಂಪ್ಯೂಟರ್ ಸೈನ್ಸ್	೨	—
	೬) ಇನ್‌ಸ್ಟ್ರುಮೆಂಟೇಷನ್ ಟೆಕ್ನಾಲಜಿ	೩	—
	೭) ಸಿಸ್ಟಂ ಅನಾಲಿಸ್ಟ್	೨	—
	ಸಹಾಯಕ ಪ್ರಾಧ್ಯಾಪಕರು—ಇಂಜಿನಿಯರಿಂಗೇತರ		
	೧) ಭೌತಶಾಸ್ತ್ರ	೧	೧
	೨) ರಸಾಯನಿಕ ಶಾಸ್ತ್ರ	೧	ಖಾಲಿ
	೩) ಗಣಿತ ಶಾಸ್ತ್ರ	೨	೨

೧	೨	೩	೪
ಉಪನ್ಯಾಸಕರು–ಇಂಜಿನಿಯರಿಂಗ್ ವಿಭಾಗ			
೧)	ಸಿವಿಲ್	೧೩	೧೦
೨)	ಮೆಕ್ಯಾನಿಕಲ್	೧೪	೧೨
೩)	ಎಲೆಕ್ಟ್ರಿಕಲ್	೮	೭
೪)	ಇ ಅಂಡ್ ಸಿ	೯	೭
೫)	ಕಂಪ್ಯೂಟರ್ ಸೈನ್ಸ್	೫	ಖಾಲಿ
೬)	ಎಲೆಕ್ಟ್ರಾನಿಕ್ಸ್ ಇನ್‌ಸ್ಟ್ರುಮೆಂಟೇಷನ್	೪	—
ಇಂಜಿನಿಯರಿಂಗೇತರ ಉಪನ್ಯಾಸಕರು			
೧)	ಭೌತಶಾಸ್ತ್ರ	೨	ಖಾಲಿ
೨)	ರಸಾಯನಶಾಸ್ತ್ರ	೧	೧
೩)	ಗಣಿತಶಾಸ್ತ್ರ	೪	೨
ಎಸ್.ಕೆ.ಎಸ್.ಜಿ.ಟಿ.ಐ. ಸಂಸ್ಥೆ, ಬೆಂಗಳೂರು			
೧)	ಪ್ರಿನ್ಸಿಪಾಲರು	೧	೧
೨)	ಪ್ರೊಫೆಸರ್ ಎನ್ ಟೆಕ್ಸ್‌ಟೈಲ್ ಟೆಕ್ನಾಲಜಿ	೩	೧
೩)	ಅಸಿಸ್ಟೆಂಟ್ ಪ್ರೊಫೆಸರ್ ಇನ್ ಟೆಕ್ಸ್‌ಟೈಲ್ ಟೆಕ್ನಾಲಜಿ	೪	ಖಾಲಿ
೪)	ಲೆಕ್ಚರರ್ ಇನ್ ಟೆಕ್ಸ್‌ಟೈಲ್ ಟೆಕ್ನಾಲಜಿ	೬	೪

ANNEXURE—III

Facilities available in Engineering Colleges of the State

Sl. No.	Name of the College	Faculty	Library Equipment	Library
1	2	3	4	5
1.	J. M. Institute of Technology, Chitradurga 577 502.	Not Satisfactory	Inadequate	Needs strengthening
2.	B. D. T. Engineering College, Davangere.	Satisfactory	Just adequate	Satisfactory
3.	Bapuji Institute of Engg,, and Technology, Davangere.	Not Satisfactory	Just adequate	Needs strengthening
4.	Jawaharlal Nehru National College of Engineering, Shimoga 577 201.	Totally Unsatisfactory	Inadequate	Not satisfactory
5.	Adichunchanagiri Institute of Technology, Chickamagalur.	Marginally Satisfactory	Not totally adequate	Inadequate
6.	Malnad College of Engg. Hassan.	Fairly satisfactory	Fairly Satisfactory	Needs strengthening
7.	National Institute of Engineering, Mysore.	Fairly Satisfactory	Marginally deficient.	More volumes to be added.
8.	Sri Jayachamarajendra College of Engg. Mysore.	Fairly good	Good	Reliably Excellent.

1	2	3	4	5
9.	P.E.S. College of Engg., Mandya.	Fairly Good	Fairly Satisfactory	Needs strengthening
10.	Karnataka Regional Engg., College, Srinivasanagar., Surathkal.	Excellent	Excellent	Excellent
11.	Nitte Mahalinga Adyanathaya Memorail Institute of Tech. Nitte.	Not satisfactory	Not satisfactory	Not satisfatory
12.	Manipal Institute of Technology, Manipal.	Good	Just adequate	Good
13.	Kuranji Venkataramana Gowda College of Engg., Sulia-574 239.	Not satisfactory	Not satisfactory	Not satisfactory
14.	Vijayanagar Engineering College, Bellary.	Not satisfactory	Inadequate	Highly inadequate
15.	Poojya Doddappa Appa College of Engg., Gulbarga.	Just satisfactory	Just adequate	Needs strengthening
16.	Rural Engineering College, Bhalki.	Not satisfactory	Not satisfactory	Inadequate
17.	Gurunanak Dev Engg., College Bidar.	Not satisfactory	Not satisfactory	Inadequate
18.	Sarojini Liladharan Nair College of Engg., Raichur.	Not satisfactory	Just satisfactory	Inadequate
19.	S.T.J. Education Society's Engg., College, Ranebennur.	Not satisfactory	Just satisfactory	Not satisfactory

20.	B.V.B. College of Engg., Hubli,	Good	Just adequate	Needs strengthening
21.	Sri Dharmasthala Manjunatheswara College of Engg., Dharwad.	Satisfactory	Satisfactory	Inadequate
22.	K.L.E. Society's Engg., College, Belgaum.	Not satisfactory	Just satisfactory	Inadequate
23.	K.L.S. Gogte Institute of Technology, Belgaum.	Good	Satisfactory	Inadequate
24.	BLDE's College of Engg., Bijapur.	Satisfactory	Not satisfactory	Inadequate
25.	Basaveshwar Engg., College, Bagalkot.	Good	Good	Inadequate
26.	Anjuman Engineering College, Bhatkal.	Not satisfactory	Not satisfactory	Inadequate
27.	University Visvesewaraya College of Engg., Bangalore.	Satisfactory	Satisfactory	Just adequate
28.	S.K.S.J.T. Institute, Bangalore.	Not satisfactory	Satisfactory	Just adequate
29.	B.M.S. College of Engg., Bangalore.	Not satisfactory	Just sufficient	Just sufficient
30.	M.S. Ramaiah Institute of Technology, Bangalore.	Fairly good	Sufficient	Just sufficient
31.	R.V. College of Engg., Bangalore.	Good	Good	Good

1	2	3	4	5
32.	Dayanda Sagar College of Engg., Bangalore 560078.	Not satisfactory	Just adequate	Needs strenthening
33.	Bangalore Institute of Technology, Bangalore.	Good	Sufficient	Needs strenthening
34.	Islamiah Institute of Technology, Bangalore.	Not Satisfactory	Not Satisfactory	Not Satisfactory.
35.	Dr- Ambedkar Institute of Technology, Bangalore.	Not Satisfactory	Just Sufficient	Inadequate.
36.	Ghousia College of Engg., Ramanagaram.	Not Satisfactory	Just Sufficient	Inadequate.
37.	M.V.J. College of Engg., (Near White field) Bangalore.	Not Satisfactory	Not Satisfactory	Inadequate.
38.	Sir M. Visveshwaraiah Institute of Technology, Bangalore.	Not Satisfactory	Not Satisfactory	Inadequate.
39.	Siddaganga Institute of Technology, Tumkur	Just Satisfactory	Satisfactory	Fairly adequate.
40.	Sri Siddartha Institute of Technology, Tumkur	Not Satisfactory	Satisfactory	Inadequate
41.	Kalpatharu Institute of Technology, Tiptur.	Very bad	Not Satisfactory	Inadequate.
42.	Kaza Bande Nawaz College of Engg., Gulbarga,	Not Satisfactory	Inadequate	Inadequate.

43.	Rural Engineering College, Hulkoti	Not Satisfactory	Not Satisfactory	Not Satisfactory
44.	Golden Valley College of Engg., K.G.F.	Not Satisfactory	Not Satisfactory	Not Satisfactory
45.	Sri Jagadguru Chandrashekarnatha Institute of Technology Chikkaballapur	Inadequate	Not Satisfactory	Needs strenghthening
46.	Sri Siddaganga (Condensed) Institute of Technology, Tumkur.	Just Satisfactory	Satisfactory	Fairly adequate
47.	U.V.C.E. (Evening), Bangalore	Satisfactory	Satisfactory	Just adequate
48.	BMS College of Engineering (Evening), Bangalore.	Not Satisfactory	Just Sufficient	Just sufficient
49.	JCE (Evening), Mysore.	Fairly good	Satisfactory	Excellent
50.	NIE (Evening), Mysore	Fairly Satisfactory	Marginally deficient	More volumes to be added.

ಶ್ರೀ ಚಂದ್ರಕಾಂತ ಜಿ. ಬೆಲ್ಲದ್.—ಸನ್ಮಾನ್ಯ ಸಭಾಧ್ಯಕ್ಷರೇ, ಕರ್ನಾಟಕ ರಾಜ್ಯಕ್ಕೆ ಈ ೫೦ ಇಂಜಿನಿಯರಿಂಗ್ ಕಾಲೇಜುಗಳ ಅಗತ್ಯತೆ ಇದೆಯೇ ? ರಾಜ್ಯದಲ್ಲಿರುವಂಥ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಎಷ್ಟೋ ವಿಷಯಗಳಿಗೆ ಸಂಬಂಧಪಟ್ಟ ಹಾಗೆ ಪ್ರಾಧ್ಯಾಪಕರುಗಳು ಇಲ್ಲ ಎನ್ನುವುದು ತಮ್ಮ ಗಮನಕ್ಕೆ ಮತ್ತು ಸರಕಾರದ ಗಮನಕ್ಕೆ ಕೂಡ ಬಂದಿದೆ. ಕೇಂದ್ರ ಸರಕಾರದ ಸಂಬಂಧಪಟ್ಟ ಶಾಖೆಯವರು ಕೂಡ ಅಂಥ ಕಾಲೇಜುಗಳಲ್ಲಿನ ಕೆಲವೊಂದು ಕೋರ್ಸ್‌ಗಳನ್ನು ಬಂದ್ ಮಾಡಬೇಕೆಂದು ತಿಳಿಸಿದ್ದಾರೆ. ಪ್ರಾಧ್ಯಾಪಕರ ಕೊರತೆಯೊಂದೇ ಅಲ್ಲ, ವಿದ್ಯಾರ್ಥಿಗಳು ಉತ್ತರಿಸಿದ ವಿಷಯಗಳಿಗೆ ಸೂಕ್ತ ರೀತಿಯಲ್ಲಿ ಮಾರ್ಕ್ಸ್ ಕೂಡ ಸಿಕ್ಕಿಲ್ಲದ ಪ್ರಕರಣಗಳು ಇವೆ. ಅಂಥಹವರು ರೀವ್ಯಾಲ್ಯುವೇಶನ್‌ಗೆ ಹಾಕಿದರೆ ಯೂನಿವರ್ಸಿಟಿಯಲ್ಲಿ ಆ ವಿಷಯಗಳಿಗೆ ಸಂಬಂಧಪಟ್ಟ ತಜ್ಞರು ಇಲ್ಲ ಎಂದು ವೈಸ್‌ಚಾನ್ಸ್‌ಲರ್ ರವರಿಂದ ತಿಳಿದುಕೊಂಡಿದ್ದೇನೆ. ಹೀಗಾದರೆ ಅಂಥ ಕಡೆಗಳಲ್ಲಿ ಅಭ್ಯಸಿಸುವ ವಿದ್ಯಾರ್ಥಿಗಳ ಪರಿಸ್ಥಿತಿ ಮತ್ತು ಭವಿಷ್ಯ ಏನಾಗಬೇಕು ? ಅನುದಾನಿತ ಕಾಲೇಜುಗಳಲ್ಲಿ ಸೂಕ್ತ ರೀತಿಯಲ್ಲಿ ಪ್ರಯೋಗಾಲಯಗಳ ವ್ಯವಸ್ಥೆ, ಗ್ರಂಥಾಲಯಗಳ ವ್ಯವಸ್ಥೆ ಇಲ್ಲ. ಇಂಥ ಸೌಲಭ್ಯಗಳು ಇಲ್ಲದಿದ್ದಲ್ಲಿ ಮಕ್ಕಳು ವಿದ್ಯಾಭ್ಯಾಸವನ್ನು ಹೇಗೆ ಮಾಡುವುದಕ್ಕೆ ಸಾಧ್ಯವಾಗುತ್ತದೆ ? ಈ ಬಗ್ಗೆ ಮಾನ್ಯ ಸಚಿವರು ದಯವಿಟ್ಟು ತಿಳಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಸದಸ್ಯರು ರಾಜ್ಯದಲ್ಲಿ ೫೦ ಇಂಜಿನಿಯರಿಂಗ್ ಕಾಲೇಜುಗಳ ಅಗತ್ಯತೆಯು ಇದೆಯೇ ಎಂದು ಕೇಳಿದ್ದಾರೆ. ಈ ಬಗ್ಗೆ ಇಲ್ಲಿ ಅನೇಕ ಬಾರಿ ಹೇಳಿದ್ದೇನೆ. ಅನೇಕ ಸಂದರ್ಭಗಳಲ್ಲಿ ಸಾರ್ವಜನಿಕರ, ಶಾಸಕರ ಮತ್ತು ಬೇರೆ ರೀತಿಯಲ್ಲಿನ ಒತ್ತಾಯದ ಮೇರೆಗೆ ಕೂಡ ಕೆಲವಾರು ಕಾಲೇಜುಗಳು ಪ್ರಾರಂಭ ಆಗಿರುವುದು ಉಂಟು. ಆದರೆ ಕಳೆದ ಎರಡು ಮೂರು ವರ್ಷಗಳಿಂದ ಹೊಸದಾಗಿ ಕಾಲೇಜುಗಳನ್ನು ಪ್ರಾರಂಭಿಸುವುದನ್ನು ನಿಲ್ಲಿಸಿದ್ದೇವೆ. ಒಂದು ಪೇಳಿ ಪರವಾನಗಿ ಕೊಟ್ಟಿದ್ದರೂ ಕೇವಲ ಒಂದೆರಡು ಕಾಲೇಜುಗಳಿಗೆ ಪರವಾನಿಗೆ ಕೊಟ್ಟಿದ್ದೇವೆ. ಮಾನ್ಯ ಸದಸ್ಯರು ಅನುದಾನಿತ ಕಾಲೇಜುಗಳಲ್ಲಿ ಪ್ರಯೋಗಾಲಯಗಳು, ಗ್ರಂಥಾಲಯಗಳು ಮತ್ತಿತರ ಅತ್ಯಗತ್ಯ ಅನುಕೂಲತೆಗಳು ಇಲ್ಲ, ಅಧ್ಯಾಪಕರುಗಳು ಕೂಡ ಸರಿಯಾಗಿ ನೇಮಕವಾಗಿಲ್ಲ ಎಂದು ಹೇಳಿದ್ದಾರೆ. ಆದರೆ ಇಂಥ ಲೋಪದೋಷಗಳು ಎಲ್ಲಾ ಕಡೆಗ್ಳಲ್ಲಿಯೂ ಇಲ್ಲ, ಹೊಸ ಕೋರ್ಸ್‌ಗಳಾದ ಎಲಕ್ಟ್ರಾನಿಕ್ಸ್ ಮತ್ತು ಕಂಪ್ಯೂಟರ್ ಕೋರ್ಸ್‌ಗಳು ಇರುವ ಕಡೆಗಳಲ್ಲಿ ಮಾತ್ರ ಸ್ವಲ್ಪ ಇಂಥ ಕೊರತೆಗಳು ಇವೆ. ಬೇರೆ ವಿಷಯಗಳ ಕಾರಿತು ಅಂಥ ಕೊರತೆ ಇಲ್ಲ. ಮಾನ್ಯ ಸದಸ್ಯರು ಹೇಳುವ ಹಾಗೆ, ಪ್ರಾಧ್ಯಾಪಕರ ಖಾಲಿ ಹುದ್ದೆಗಳು ಹೆಚ್ಚು ಪ್ರಮಾಣದಲ್ಲಿ ಇಲ್ಲ. ಯಾವ ಯಾವ ಕೋರ್ಸ್‌ಗಳಿಗೆ ಎಷ್ಟು ಶಿಕ್ಷಕರು, ಉಪನ್ಯಾಸಕರು ಮುಂತಾದವರು ಬೇಕಾಗಿದ್ದಾರೋ ಅವರೆಲ್ಲರನ್ನೂ ತುಂಬುವುದಕ್ಕೆ ಕೆಲವು ಸಂದರ್ಭಗಳಲ್ಲಿ ಆಗದಿರಬಹುದು. ಆದರೆ ಪ್ರಾಧ್ಯಾಪಕರ ಕೊರತೆ ಬಗ್ಗೆ ಅವರು ಸೂಕ್ತ ವ್ಯವಸ್ಥೆಯನ್ನು ಮಾಡಿಕೊಳ್ಳಲು ಕ್ರಮ ತೆಗೆದುಕೊಳ್ಳುತ್ತೇನೆ. ಇನ್ನು ಮಾನ್ಯ ಸದಸ್ಯರು ಕಾಲೇಜುಗಳಲ್ಲಿ ಸೂಕ್ತ ಸೌಕರ್ಯಗಳು ಇಲ್ಲ ಎಂದು ಹೇಳಿದ್ದಾರೆ. ಈ ತರಹದ ಲೋಪದೋಷಗಳು ಇರುವುದನ್ನು ತಿಳಿದುಕೊಳ್ಳಲು ಹೋದ ವರ್ಷ ಒಂದು ಸಮಿತಿಯನ್ನು ನಾವು ಮಾಡಿದ್ದೇವೆ. ಈಗಲೂ ಕೂಡ ಆದೇ ರೀತಿಯ ಸಮಿತಿಯನ್ನು ಮಾಡಿದ್ದೇವೆ, ಪರಿಣಿತರಾದ ಎಸ್. ಜಿ. ರಾಮಚಂದ್ರರಾವ್‌ರವರ ನೇತೃತ್ವದಲ್ಲಿ ನಾಲ್ಕು ಜನರ ಒಂದು ಸಮಿತಿಯನ್ನು ಈ ಬಗ್ಗೆ ಅಧ್ಯಯನ ಮಾಡುವುದಕ್ಕೋಸ್ಕರವಾಗಿ ಮಾಡಿದ್ದೇವೆ. ಈ ಸಮಿತಿಯು ಈ ೫೦ ಕಾಲೇಜುಗಳಿಗೆ ಭೇಟಿ ಮಾಡಿ ಯಾವ ಯಾವ ಕಾಲೇಜುಗಳಲ್ಲಿ ಯಾವ ಯಾವ ವಿಷಯಗಳಿಗೆ ಸಂಬಂಧಪಟ್ಟ ಹಾಗೆ ಅಗತ್ಯವಾದ ಸೌಕರ್ಯ, ಸೌಲಭ್ಯ ಮತ್ತು ಅಧ್ಯಾಪಕ ವರ್ಗ ಇದೆಯೇ ಎಂಬುದನ್ನು ತಿಳಿದುಕೊಂಡು ಅಂಥ ಅವಶ್ಯಕ ಸೌಲಭ್ಯಗಳು ಇಲ್ಲದಿದ್ದರೆ ಅಂಥ ಕಾಲೇಜುಗಳ ಅಫಿಲಿಯೇಷನ್ ತೆಗೆದುಹಾಕುವುದಕ್ಕೆ ಹೇಳುತ್ತೇವೆ ಹಾಗೂ ಇಂಟೇಕ್ ಕೂಡ ಕಡಿಮೆ ಮಾಡಬೇಕೆಂಬ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಸಮಿತಿಯು ವರದಿ ಬೇಕಾಗಿದೆ. ಬಂದ ಮೇಲೆ ಆ ಬಗ್ಗೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

ಶ್ರೀ ಚಂದ್ರಕಾಂತ ಜಿ. ಬೆಲ್ಲದ್.—ಕೆಲವೊಂದು ಕಾಲೇಜುಗಳಲ್ಲಿ ವಿಷಯಕ್ಕೆ ಸಂಬಂಧಪಟ್ಟ ಉಪನ್ಯಾಸಕರುಗಳು ಇಲ್ಲ, ಅಧ್ಯಾಪಕರುಗಳು ಇಲ್ಲ, ಪ್ರೊಫೆಸರ್ಸ್ ಮತ್ತು ತಜ್ಞರು ಇಲ್ಲ. ಈ ವಿಚಾರವನ್ನು ವಿಶ್ವವಿದ್ಯಾನಿಲಯದವರೇ ಹೇಳಿದ್ದಾರೆ. ಇಂಥ ಕಾಲೇಜುಗಳಲ್ಲಿ ಅಭ್ಯಸಿಸಿದ ವಿದ್ಯಾರ್ಥಿಗಳಿಗೆ ಮುಂದಿನ ಪರೀಕ್ಷೆಯಲ್ಲಿ ಅವಕಾಶ ಕೊಡುವುದಿಲ್ಲ ಎಂದು ಹೇಳಿದ್ದಾರೆ. ಹಾಗಾದರೆ ವಿದ್ಯಾರ್ಥಿಗಳ ಪರಿಸ್ಥಿತಿ ಏನಾಗಬೇಕು ? ಆದುದರಿಂದ ಇಂಥ ಅನುದಾನಿತ ಕಾಲೇಜುಗಳು ಏನಿವೆ ಅವುಗಳನ್ನು ರದ್ದು ಮಾಡುವುದು ಉಚಿತವಲ್ಲವೇ ? ಇಂಥ ಕಾಲೇಜುಗಳನ್ನು ಇಡುವುದರಿಂದ ಮಕ್ಕಳ ಭವಿಷ್ಯ ಹಾಳಾಗುವುದಿಲ್ಲವೇ ?

ಶ್ರೀ ಎಂ. ಚಂದ್ರಶೇಖರ್.—ಅವ್ಯವಸ್ಥಿತವಾದ ಕಾಲೇಜುಗಳ ಬಗ್ಗೆ ಅಭ್ಯಸಿಸಲು ಒಂದು ಸಮಿತಿಯನ್ನು ರಚನೆ ಮಾಡುವುದರ ಮೂಲಕ ಸರ್ಕಾರವು ಕ್ರಮ ತೆಗೆದುಕೊಂಡಿದೆ. ಆ ಸಮಿತಿಯ ವರದಿಯು ಬರುತ್ತಾ ಇದ್ದು, ಬಂದ ಕೂಡಲೇ ಆ ದಿಶೆಯಲ್ಲಿ ಯೋಗ್ಯ ಕ್ರಮವನ್ನು ತೆಗೆದುಕೊಳ್ಳಲಾಗುವುದು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಕೂಡ್ಲಿಗಿ ತಾಲ್ಲೂಕಿನಲ್ಲಿ ಬಂಬೂ ಸಸಿಗಳನ್ನು ಬೆಳೆಸುವುದು

೧೭೩. (೬೭೧) ಶ್ರೀ ಕೆ. ವಿ. ರವೀಂದ್ರನಾಥ ಬಾಬು (ಕೊಟ್ಟೂರು). ಮಾನ್ಯ ಕೃಷಿ ಹಾಗೂ ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಅರಣ್ಯ ಇಲಾಖೆಯಿಂದ ಕೂಡ್ಲಿಗಿ ತಾಲ್ಲೂಕಿನಲ್ಲಿ ಬೀಳು ಭೂಮಿಯಲ್ಲಿ ಬೊಂಬು ನೆಡುತೋಪು ಬೆಳೆಸದೆ ಇರಲು ಕಾರಣವೇನು ?

ಆ) ಕೂಡ್ಲಿಗಿ ತಾಲ್ಲೂಕಿನಲ್ಲಿ ಮೂರನೇ ವರ್ಷದಲ್ಲಿ ಬೊಂಬು ಬೆಳೆಯನ್ನು ಕಟಾವು ಮಾಡಿದಾಗ ಗರಿಷ್ಟ ಮಟ್ಟದಲ್ಲಿ ನಿರುದ್ಯೋಗ ಸಮಸ್ಯೆಯ ಪರಿಹಾರವಾಗುವುದೆಂದು ತಿಳಿದಿಲ್ಲವೆ ?

ಶ್ರೀ ಬಿ. ರಾಚಯ್ಯ (ಕೃಷಿ ಹಾಗೂ ಅರಣ್ಯ ಮಂತ್ರಿಗಳು).—

ಅ) ಕೂಡ್ಲಿಗಿ ತಾಲ್ಲೂಕಿನಲ್ಲಿರುವ ಬೀಳು ಭೂಮಿಗಳು ಗಡಸು ಮಣ್ಣಿನಿಂದ ಹಾಗೂ ಬಂಡೆಗಳಿಂದ ಕೂಡಿರುತ್ತದೆ. ಮತ್ತು ವಾತಾವರಣವು ಶುಷ್ಕ ಹಾಗೂ ಅತೀವ ಉಷ್ಣವಾಗಿರುತ್ತದೆ. ಆದುದರಿಂದ ಹೆಚ್ಚಿನ ರೀತಿಯಲ್ಲಿ ಬಿದಿರು ಬೆಳೆಯುವ ಸಾಧ್ಯತೆ ಇರುವುದಿಲ್ಲ. ಬಿದಿರನ್ನು ಕೆರೆ ಅಂಗಳಗಳಲ್ಲಿ ಬೆಳೆಸಲಾಗುತ್ತಿದೆ.

ಆ) ಕೂಡ್ಲಿಗಿಯ ಶುಷ್ಕ ಭೂಮಿಯಲ್ಲಿ ಬೆಳೆಸಿದ ಬಿದಿರಿನ ಮಂದಗತಿ ಬೆಳವಣಿಗೆ, ಪ್ರತಿಕೂಲ ವಾತಾವರಣ ಮತ್ತು ಮಣ್ಣಿನ ಗುಣಗಳಿಂದ ಮೂರು ವರ್ಷದಲ್ಲಿ ಬಿದಿರು ಕಡಿತಕ್ಕೆ ಬರುವುದಿಲ್ಲ.

ಬಸವನ ಬೆಟ್ಟ ಅಭಯಾರಣ್ಯ

೧೭೪ (೬೭೦) ಶ್ರೀ ಕೆ. ಎಲ್. ಶಿವಲಿಂಗೇಗೌಡ (ಸಾತನೂರು).—ಮಾನ್ಯ ವ್ಯವಸಾಯ ಮತ್ತು ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಕನಕಪುರ ಮತ್ತು ಮಳವಳ್ಳಿ ತಾಲ್ಲೂಕುಗಳಿಗೆ ಸೇರಿದ ಬಸವನ ಬೆಟ್ಟ ಅರಣ್ಯವನ್ನು ಅಭಯಾರಣ್ಯವನ್ನಾಗಿ ಘೋಷಿಸಿ ಎಷ್ಟು ವರ್ಷಗಳಾದವು ?

ಆ) ಅಭಯಾರಣ್ಯವನ್ನಾಗಿ ಘೋಷಿಸಿದ ನಂತರ ಏನೇನು ಕಾರ್ಯಕ್ರಮಗಳನ್ನು ರೂಪಿಸಿ ಕಾರ್ಯಚರಣೆಗೆ ತರಲಾಗಿದೆ ?

ಇ) ಅಭಯಾರಣ್ಯದ ಮಧ್ಯದಲ್ಲಿ ಎಷ್ಟು ರೆವಿನ್ಯೂ ಹಳ್ಳಿಗಳಿವೆ, ಸದರಿ ರೆವಿನ್ಯೂ ಗ್ರಾಮಗಳಲ್ಲಿ ವನ್ಯ ಪ್ರಾಣಿಗಳಿಂದ ರೈತರ ಬೆಳೆಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಬಂದಿದ್ದಲ್ಲಿ ಈವರೆವಿಗೂ ಎಷ್ಟು ಪರಿಹಾರವನ್ನು ನೀಡಲಾಗಿದೆ ?

ಈ) ವನ್ಯ ಪ್ರಾಣಿಗಳಿಂದಾಗಿ ಬೆಳೆ ಹಾಳಾಗುತ್ತಿರುವ ಹಳ್ಳಿಗಳನ್ನು ಸ್ಥಳಾಂತರ ಮಾಡಿದರೆ ವನ್ಯ ಪ್ರಾಣಿಗಳಿಗೆ ಅನುಕೂಲವಾಗುವುದರ ಜೊತೆಗೆ ರೈತರಿಗಾಗುತ್ತಿರುವ ತೊಂದರೆಯನ್ನು ತಪ್ಪಿಸಿದಂತಾಗುವು ಲ್ಲವೇ ?

ಶ್ರೀ ಬಿ. ರಾಚಯ್ಯ (ವ್ಯವಸಾಯ ಮತ್ತು ಅರಣ್ಯ ಮಂತ್ರಿಗಳು),—

ಅ) ಬಸವನ ಬೆಟ್ಟ ಅರಣ್ಯವನ್ನು "ಕಾವೇರಿ ವನ್ಯ ಪ್ರಾಣಿಗಳ ಅಭಯಾರಣ್ಯ" ಎಂದು ಘೋಷಿಸಿ ೨ ವರ್ಷ ೨ ತಿಂಗಳು ಆಗಿರುತ್ತದೆ.